

بسم اللہِ الرّحمٰنِ الرّحيم

# ರಮಝಾನ್ ತಿಂಗಳಲ್ಲಿ ಹೆಚ್ಚು ಹೆಚ್ಚು ದುಆ ಮಾಡಿರಿ. ಅಲ್ಲಾಹನ ಅನುಗ್ರಹಗಳ ಪ್ರಯೋಜನವನ್ನು ಪಡೆಯುವವರಾಗಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **‘ಬೈತುಲ್ ಫುತೂಹ್’** ಮಸೀದಿಯಲ್ಲಿ**19-06-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು ಜುಮುಅ ಎಂಬ ಅನುಗ್ರಹೀತ ದಿನವಾಗಿದೆ. ಮತ್ತು ಅನುಗ್ರಹಭರಿತ ರಮಝಾನ್ ತಿಂಗಳ ಪ್ರಥಮ ಉಪವಾಸ ದಿನವೂ ಆಗಿದೆ. ಈ ದಿನ ಅಸಂಖ್ಯಾತ ಅನುಗ್ರಹಗಳೊಂದಿಗೆ ಪ್ರಾರಂಭವಾಗುವ ದಿನವಾಗಿದೆ. ಹಝ್ರತ್ ಮುಹಮ್ಮದ್ ﷺರು ಜುಮುಅ ದಿನ ಅನುಗ್ರಹಭರಿತವಾಗಿರುವುದರ ಬಗ್ಗೆ ತಿಳಿಸಿದ್ದರು. ಇದು ಯಾವಾಗಲೂ ಜಾರಿಯಲ್ಲಿರುವುದಾಗಿದೆ. ಜುಮುಅದ ದಿನದಲ್ಲಿ ಎಂತಹ ಒಂದು ಸಮಯ ಇರುತ್ತದೆ ಎಂದರೆ ಆ ಸಮಯದಲ್ಲಿ ಸತ್ಯವಿಶ್ವಾಸಿ ತನ್ನ ಪ್ರಭುವಿನ ಮುಂದೆ ಏನನ್ನು ಬೇಡಿಕೊಳ್ಳುತ್ತಾನೋ ಅದು ಅಂಗೀಕಾರ ಪಡೆಯುತ್ತದೆ. ಅದೇರೀತಿ ರಮಝಾನ್ ತಿಂಗಳ ಬಗ್ಗೆ ಹಝ್ರತ್ ಮುಹಮ್ಮದ್ ﷺರು ಹೇಳಿದರು: ರಮಝಾನ್ ತಿಂಗಳು ಪ್ರಾರಂಭವಾಗುವಾಗ ಸ್ವರ್ಗದ ಬಾಗಿಲುಗಳು ತೆರೆಯಲ್ಪಡುತ್ತವೆ. ಮತ್ತು ನರಕದ ಬಾಗಿಲುಗಳು ಮುಚ್ಚಲ್ಪಡುತ್ತವೆ ಎಂದು.

ಅಲ್ಲಾಹನ ಅನುಗ್ರಹಗಳು ಈ ತಿಂಗಳಲ್ಲಿ ವಿಶಿಷ್ಟವಾಗಿ ವರ್ಧಿಸುತ್ತವೆ. ಸತ್ಯವಿಶ್ವಾಸಿಗಳ ಮೇಲೆ ಅಲ್ಲಾಹನ ಅನುಗ್ರಹಗಳ ಮಳೆ ಸುರಿಯುತ್ತವೆ. ಆದರೆ ಈ ಅನುಗ್ರಹಗಳನ್ನು ಪಡೆಯಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೆಲವು ಶರತ್ತುಗಳನ್ನು ವಿವರಿಸಿದ್ದಾರೆ. ಅದೇನೆಂದರೆ, ಈ ದಿನಗಳಲ್ಲಿ ಅನಾವಶ್ಯಕ ಮಾತುಗಳನ್ನಾಡಬಾರದು, ಬೊಬ್ಬೆ, ಕಲಹಗಳಿರಬಾರದು, ಬೈಗಳು ಮತ್ತು ಜಗಳಗಳಿಂದ ದೂರವಿರಬೇಕು. ಪ್ರತಿಯೊಂದು ಕೆಡುಕನ್ನು ಎದುರಿಸುವಾಗ ಉಪವಾಸ ಅನುಷ್ಠಿಸುವವನು “ನಾನು ಉಪವಾಸಗಾರನಾಗಿದ್ದೇನೆ. ಅಲ್ಲಾಹನಿಗೋಸ್ಕರ ನಾನು ಎಲ್ಲ ಕೆಡುಕುಗಳಿಂದ ನನ್ನನ್ನು ರಕ್ಷಿಸಿಕೊಳ್ಳುತ್ತೇನೆ.” ಎಂದು ಹೇಳಬೇಕು. ಈ ಸ್ಥಿತಿ ಉಂಟಾಗುವಾಗ ವಾಸ್ತವಿಕವಾಗಿ ಉಪವಾಸದ ಬಗ್ಗೆ ತಿಳಿಯುವುದು. ಮನುಷ್ಯನು ಅಲ್ಲಾಹನಿಗೋಸ್ಕರ ಈ ತಿಂಗಳಲ್ಲಿ ಅಲ್ಲಾಹನ ಆಜ್ಞೆಗಳನ್ನು ಪಾಲಿಸುವವನಾಗಿ ಜೀವಿಸಲು ಪ್ರಯತ್ನಿಸುವುದಾದರೆ ಅವನು ಸರಿಯಾಗಿ ಉಪವಾಸ ಮಾಡುವವನಾಗುತ್ತಾನೆ. ಅಲ್ಲಾಹನು, ಪ್ರಾರ್ಥನೆಗಳ ಅಂಗೀಕಾರವನ್ನು ಇದರೊಂದಿಗೆ ಜೋಡಿಸಿದ್ದಾನೆ. ಅವನು ಹೇಳುತ್ತಾನೆ:

وَإِذَا سَأَلَكَ عِبَادِي عَنِّي فَإِنِّي قَرِيبٌ ۖ أُجِيبُ دَعْوَةَ الدَّاعِ إِذَا دَعَانِ ۖ فَلْيَسْتَجِيبُوا لِي وَلْيُؤْمِنُوا بِي لَعَلَّهُمْ يَرْشُدُونَ ﴿١٨٧﴾

**ವ ಇಝಾ ಸಅಲಕ ಇಬಾದೀ ಅನ್ನೀ ಫಇನ್ನೀ ಖರೀಬುನ್ ಉಜೀಬು ದಅ್‌ವತದ್ದಾಇ ಇಝಾ ದಆನಿ. ಫಲ್ ಯಸ್ತಜೀಬೂ ಲೀ, ವಲ್ ಯೂಮಿನೂ ಬೀ, ಲಅಲ್ಲಹುಮ್ ಯರ್‌ಶುದೂನ್**

(ಓ ಪ್ರವಾದಿ) ನನ್ನ ಬಗ್ಗೆ ನನ್ನ ದಾಸರು ನಿನ್ನೊಡನೆ ಕೇಳಿದರೆ (ಹೇಳು) – ಖಂಡಿತವಾಗಿಯೂ ನಾನು ಸಮೀಪದಲ್ಲಿಯೇ ಇದ್ದೇನೆ. ನನ್ನನ್ನು ಕರೆದು ಪ್ರಾರ್ಥಿಸುವಾಗ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರ ನೀಡುವೆನು. ಆದ್ದರಿಂದ ಅವರು ಸತ್ಪಥವನ್ನು ಪಡೆಯಲಿಕ್ಕಾಗಿ ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ನಂಬಿಕೆ ಇರಿಸಲಿ. (ಪವಿತ್ರ ಖುರ್‌ಆನ್ 2: 187)

ರಮಝಾನ್ ತಿಂಗಳಲ್ಲಿ ಬರುವ ಜುಮುಅ ದಿನಗಳು ಹೇಗಿರುತ್ತವೆ ಎಂದರೆ ಅವುಗಳ ಮಹತ್ವ ಇಮ್ಮಡಿಯಾಗುತ್ತವೆ. ಹಗಲುಗಳು ಪ್ರಾರ್ಥನೆ ಅಂಗೀಕಾರ ಪಡೆಯುವ ಹಗಲುಗಳಾಗಿವೆ. ರಾತ್ರಿಗಳು ಸಹ ಪ್ರಾರ್ಥನೆ ಅಂಗೀಕಾರ ಪಡೆಯುವ ರಾತ್ರಿಗಳಾಗಿವೆ. ಆದರೆ ದುಆ ಅಂಗೀಕಾರಗೊಳ್ಳುವ ಸಮಯ ಯಾವುದೆಂದು ನಿಮಗೆ ತಿಳಿದಿಲ್ಲ ಎಂದು ಅಲ್ಲಾಹನು ಹೇಳುತ್ತಾನೆ. ಆದುದರಿಂದ ಹಗಲು ಮತ್ತು ರಾತ್ರಿ ಪ್ರಾರ್ಥಿಸುತ್ತಾ ಇರಬೇಕು. ನಾವು ರಮಝಾನಿನ ಈ ದಿನಗಳಿಂದ ಹೆಚ್ಚು ಹೆಚ್ಚು ಪ್ರಯೋಜನ ಪಡೆಯುವವರಾಗಬೇಕು. ರಮಝಾನ್ ತಿಂಗಳಲ್ಲಿ ಅಲ್ಲಾಹನು ಶೈತಾನನನ್ನು ಹಿಡಿದುಕಟ್ಟಿ ಸ್ವರ್ಗದ ಬಾಗಿಲುಗಳನ್ನು ತೆರೆದಿರುವನು ಮತ್ತು ದಾಸರ ಸಮೀಪಕ್ಕೆ ಬಂದಿರುವನು. ರಮಝಾನಿನ ಜುಮುಅಗಳಿಂದಲೂ ಧಾರಾಳ ಪ್ರಯೋಜನ ಪಡೆಯಬೇಕು. ಆದರೆ ಈ ದಿನಗಳಲ್ಲಿ ನಾವು ಮಾಡಬೇಕಾದ ಅತ್ಯಂತ ಮುಖ್ಯ ಪ್ರಾರ್ಥನೆ, ಅತ್ಯಂತ ವಿನಯಾನ್ವಿತನಾಗಿ ನಿಷ್ಠಾಪೂರ್ಣವಾಗಿ ಅಲ್ಲಾಹನೊಂದಿಗೆ ಹೀಗೆ ಪ್ರಾರ್ಥಿಸಬೇಕು. “ರಮಝಾನ್ ತಿಂಗಳಲ್ಲಿ ಮಾತ್ರವಲ್ಲ ಇತರ ದಿನಗಳಲ್ಲೂ ಯಾರ ಪ್ರಾರ್ಥನೆಗಳು ಹಗಲುಗಳಲ್ಲಿ ನಿನ್ನ ಅಂಗೀಕಾರ ಪಡೆಯುತ್ತಿವೆಯೋ, ಯಾರ ಪ್ರಾರ್ಥನೆಗಳು ರಾತ್ರಿಗಳಲ್ಲಿ ನಿನ್ನ ಅಂಗೀಕಾರ ಪಡೆಯುತ್ತಿವೆಯೋ ಅಂತಹವರೊಂದಿಗೆ ಸೇರುವಂತೆ ನನಗೆ ನೀನು ಅನುಗ್ರಹವನ್ನು ಕರುಣಿಸು” ಎಂದು ಪ್ರಾರ್ಥಿಸಬೇಕು. ಈ ರೀತಿ ರಮಝಾನ್ ಒಂದು ಪರಿಶುದ್ಧ ಬದಲಾವಣೆ ಉಂಟು ಮಾಡುವಂತಹದಾಗಲಿ. ತಖ್ವದಲ್ಲಿ (ಭಯಭಕ್ತಿಯಲ್ಲಿ) ಚಲಿಸುವಂತೆ ಮಾಡಲಿ. “ಸ್ಥಿರವಾಗಿ ಮಾರ್ಗದರ್ಶನ ಗಳಿಸುವವರೊಂದಿಗೆ ನಾನು ಸೇರುವಂತಾಗಲಿ” ಎಂದು ಪ್ರಾರ್ಥಿಸಿರಿ.

ಅಲ್ಲಾಹನು ಉಪವಾಸದ ಅನುಗ್ರಹಗಳನ್ನು ವಿವರಿಸುವಾಗ ಹಿಂದಿನ ಕಾಲದ ಜನಾಂಗಗಳಿಗೂ ಉಪವಾಸ ವ್ರತವನ್ನು ವಿಧಿಸಲಾಗಿತ್ತು ಎಂದು ಹೇಳಿರುವನು. ಇದರ ಅರ್ಥ, ಹಿಂದಿನ ಕಾಲದ ಜನಾಂಗಗಳು ಉಪವಾಸ ಅನುಷ್ಠಿಸುತ್ತಾ ಇದ್ದುದರಿಂದ ನೀವು ಸಹ ಉಪವಾಸ ಅನುಷ್ಠಿಸಿರಿ ಎಂದಲ್ಲ. ಉಪವಾಸವನ್ನು

ವಿಧಿಸಿದುದರ ಉದ್ದೇಶವನ್ನು ಆ ವಚನದ ಕೊನೆಯಲ್ಲಿ ಹೇಳಲಾಗಿದೆ. **ಲಅಲ್ಲಕುಮ್ ತತ್ತಖೂನ್** ನೀವು ತಖ್ವ ಹೊಂದಿದವರಾಗಲಿಕ್ಕಾಗಿ. ಆಧ್ಯಾತ್ಮಿಕ ಮತ್ತು ನೈತಿಕ ಬಲಹೀನತೆಗಳಿಂದ ರಕ್ಷಣೆ ಪಡೆಯಲಿಕ್ಕಾಗಿ. ಎಂದು ಹೇಳಿರುವನು. ಅಲ್ಲಾಹನು **ಲಅಲ್ಲಹುಮ್ ಯರ್‌ಶುದೂನ್.** "ಅವರು ಸತ್ಪಥಗಳಿಸಲಿಕ್ಕಾಗಿ" ಎಂದು ಸಹ ಹೇಳಿದ್ದಾನೆ. ಸರಿಯಾದ ಕೆಲಸ ಮತ್ತು ಮಾರ್ಗದರ್ಶನದ ಮಾರ್ಗ ಅದಾಗಿದೆ. ಸರಿಯಾದ ಸ್ವಭಾವಗುಣಗಳು, ಬುದ್ಧಿಯು ಪಕ್ವಗೊಂಡು ಸರಿಯಾದ ಮಾರ್ಗದಲ್ಲಿ ಅದನ್ನು ಉಪಯೋಗಿಸುವುದು ಮತ್ತು ಆ ಸ್ಥಿತಿಯಲ್ಲಿ ಸ್ಥಿರತೆ ಕಾಪಾಡುವುದು.

ಮನುಷ್ಯನು ಏಕಾಗ್ರತೆಯಿಂದ ಅಲ್ಲಾಹನ ಮುಂದೆ ಬಾಗುವಾಗ ಅವನು ತನ್ನ ಪ್ರಾರ್ಥನೆಗಳು ಅಂಗೀಕಾರ ಪಡೆಯುವುದನ್ನು ಕಾಣುತ್ತಾನಲ್ಲದೆ ತಖ್ವದಲ್ಲಿ ಮತ್ತು ಒಳಿತಿನಲ್ಲಿ ಸ್ಥಿರವಾಗಿದ್ದುಕೊಂಡು ತನ್ನ ವಿಶ್ವಾಸದಲ್ಲಿ ದೃಢತೆಗಳಿಸುತ್ತಾ ಹೋಗುತ್ತಾನೆ ಮತ್ತು ಅಲ್ಲಾಹನ ಅನುಗ್ರಹಗಳನ್ನು ಬಾಚಿಕೊಳ್ಳುವವನಾಗುತ್ತಾನೆ.

ರಮಝಾನ್ ಅಸಂಖ್ಯಾತ ಅನುಗ್ರಹಗಳ ತಿಂಗಳಾಗಿದೆ. ಆದರೆ ಈ ಅನುಗ್ರಹಗಳು ಅಲ್ಲಾಹನ ಆಜ್ಞೆಗಳನ್ನು ಪಾಲಿಸುತ್ತಾ ತಮ್ಮ ವಿಶ್ವಾಸವನ್ನು ಬಲಪಡಿಸಿಕೊಳ್ಳುವವರಿಗೆ ಲಭಿಸುತ್ತವೆ. ನಾವು ಚೆನ್ನಾಗಿ ಮನವರಿಕೆ ಮಾಡಿಕೊಳ್ಳಬೇಕು – ಒಳಿತು ಮತ್ತು ತಖ್ವದಲ್ಲಿ ಸ್ಥಿರತೆಯಿಂದ ವರ್ತಿಸುವವರೇ ತಮ್ಮ ಉದ್ದೇಶ ಲಕ್ಷ್ಯಗಳನ್ನು ತಲಪುವರು. ವೈಯಕ್ತಿಕವಾಗಿಯೂ ಜಮಾಅತ್ ರೂಪದಲ್ಲೂ ಅಲ್ಲಾಹನು ನಮಗೆ ವಿಧಿಸಿರುವ ಸತ್ಫಲಗಳು ದೊರಕುವುವು – ಇನ್‌ಶಾಅಲ್ಲಾಹ್. ನಾನು ಹೇಳಿದ ಹಾಗೆ ನಾವು ವಿನಯವಂತರಾಗಬೇಕು. ನಮ್ಮ ತಪ್ಪುಗಳನ್ನು ಒಪ್ಪಿಕೊಳ್ಳಬೇಕು. ಮತ್ತು ಅಲ್ಲಾಹನನ್ನು ಗಳಿಸಲು ಪ್ರಯತ್ನಿಸಬೇಕು. ಆಗ ನಾವು ಅಲ್ಲಾಹನ ಅನುಗ್ರಹ ಗಳಿಸುವವರಾಗುವೆವು.

ಮನುಷ್ಯನು ತಪ್ಪು ಮಾಡಿರಬಹುದು, ಪಾಪ ಕೃತ್ಯ ಎಸಗಿರಬಹುದು, ಆದರೆ ಅವನ ಹೃದಯದಲ್ಲಿ ಅಲ್ಲಾಹನ ಭಯವಿದ್ದರೆ ಮತ್ತು ಅವನು ತಪ್ಪುಗಳನ್ನು ನಿವೇದಿಸುತ್ತಾನಾದರೆ ಅವನು ಭಯಭಕ್ತಿಯಿಂದ ಬೇಡಿಕೊಳ್ಳುವಾಗ ಅಲ್ಲಾಹನು ಅವನ ಪಾಪಗಳನ್ನು ಮರೆಮಾಡುತ್ತಾ ಇರುತ್ತಾನೆ. ಕೊನೆಗೆ ಅವನು ಪಶ್ಚಾತ್ತಾಪಗೊಂಡು ಬೇಡಿಕೊಳ್ಳುವಾಗ ಅಲ್ಲಾಹನು ಅವನನ್ನು ಕ್ಷಮಿಸುತ್ತಾನೆ.

ಆದುದರಿಂದ ಈ ದಿನಗಳಲ್ಲಿ ನಾವು ನಮಗೋಸ್ಕರ, ನಮ್ಮ ಸಂಬಂಧಿಕರಿಗೋಸ್ಕರ, ಜಮಾಅತಿನ ಜನರಿಗೋಸ್ಕರ ಅತ್ಯಂತ ಹೆಚ್ಚು ಪ್ರಾರ್ಥಿಸುತ್ತಿರಬೇಕು. ನಮ್ಮಲ್ಲಿ ಪ್ರತಿಯೊಬ್ಬನಿಗೆ ಅಲ್ಲಾಹನು ತಖ್ವವನ್ನು ದಯಪಾಲಿಸಲಿ. ನಾವು ಒಬ್ಬರಿನ್ನೊಬ್ಬರ ಬಗ್ಗೆ ನೋವಿನೊಂದಿಗೆ ಪ್ರಾರ್ಥಿಸುವಾಗ ದೇವದೂತರು ಸಹ ಪ್ರಾರ್ಥನೆಯಲ್ಲಿ ನಮ್ಮೊಂದಿಗೆ ಜೊತೆಗೂಡುವರು. ರಮಝಾನಿನ ವಾಸ್ತವಿಕವಾದ ಮತ್ತು ಸ್ಥಿರವಾಗಿರುವ ಅನುಗ್ರಹಗಳ ದೃಶ್ಯಗಳನ್ನು ನಾವು ನೋಡುವವರಾಗುವೆವು.

ತಖ್ವ ಎಂದರೇನು? ತಖ್ವ ಎಂದರೆ ಅಲ್ಲಾಹನ ಬಗ್ಗೆ ಭಯಭೀತಿಯಾಗಿದೆ. ನಾವು ಅಲ್ಲಾಹನ ಬಗ್ಗೆ ಭಯಭೀತಿ ಹೊಂದಿರುವಾಗ ಅಲ್ಲಾಹನು ನಮ್ಮ ಬಲಹೀನತೆಗಳನ್ನೂ ಪಾಪಗಳನ್ನೂ ಮರೆಮಾಡುತ್ತಾ ಹೋಗುವನು ಮತ್ತು ನಾವು ಅವನ ಸಂರಕ್ಷಣೆಯಲ್ಲಿ ಆಗುವೆವು. ಆದುದರಿಂದ ಈ ತಿಂಗಳ ಅನುಗ್ರಹಗಳನ್ನು ಪಡೆಯಲು ನಮ್ಮಲ್ಲಿ ಪ್ರತಿಯೊಬ್ಬನು ಅಲ್ಲಾಹನ ಅಬ್‌ದ್ (ದಾಸನಾಗಲು) ಪ್ರಯತ್ನಿಸಬೇಕು. ನಮ್ಮ ನ್ಯೂನತೆಯ ಕಾರಣದಿಂದ ನಮ್ಮ ಕೆಲವು ಪ್ರಾರ್ಥನೆಗಳನ್ನು ಅಲ್ಲಾಹನು ಸ್ವಲ್ಪ ಕಾಲ ಅಂಗೀಕರಿಸದೆ ಇರಬಹುದು. ಅದು ತಾಯಿ ತನ್ನ ಮಗುವಿನ ಸ್ವಭಾವ ಸುಧಾರಣೆಗೆ ಸ್ವಲ್ಪ ಸಮಯ ಮಗುವಿನ ಮೇಲೆ ಕೋಪ ಪ್ರಕಟಿಸುವ ಹಾಗೆ. ಆದರೆ ಆ ಕೋಪ ಕಠಿಣವಾಗಿರುವುದಿಲ್ಲ. ಆದರೆ ಮಗು ತಾಯಿಯೊಂದಿಗಿರುವ ಪ್ರೀತಿಯ ಕಾರಣ ಮತ್ತೂ ತಾಯಿಯ ಬಳಿಗೆ ಹೋಗುತ್ತದೆ. ಆಗ ತಾಯಿ ಅದನ್ನು ತಬ್ಬಿಕೊಳ್ಳುತ್ತಾಳೆ. ಅದರ ಮೊದಲು ತಾಯಿ ಇಣುಕಿ ನೋಡುತ್ತಾ ಇರುತ್ತಾಳೆ ಮಗು ಏನು ಮಾಡುತ್ತಿದೆ ಎಂದು. ಅದು ನನ್ನ ಬಳಿಗೆ ಬರುವುದೋ ಇಲ್ಲವೋ ಎಂದು. ಆದರೆ ಮಗು ಸಮೀಪ ಬರುವಾಗ ತಾಯಿಯ ಕೋಪ ಹೊರಟು ಹೋಗುತ್ತದೆ. ಅಲ್ಲಾಹನು ತಾಯಿಗಿಂತ ಹೆಚ್ಚು ಕ್ಷಮಿಸುವವನಾಗಿದ್ದಾನೆ. ಅವನು ನೋಡುತ್ತಾನೆ. ನನ್ನ ದಾಸರು ಪಶ್ಚಾತ್ತಾಪಗೊಂಡು ಕ್ಷಮಿಸಲು ಬೇಡಿ ಕೊಳ್ಳುತ್ತಾ ಬರಲಿ ನಾನು ಅವರನ್ನು ಕ್ಷಮಿಸುವೆನು ಎಂದು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದಾರೆ: ಅಲ್ಲಾಹನಾಣೆ! ತನ್ನ ದಾಸನು ಪಶ್ಚಾತ್ತಾಪಗೊಂಡು ಕ್ಷಮೆ ಯಾಚಿಸುವಾಗ ಅಲ್ಲಾಹನು ಎಷ್ಟು ಸಂತೋಷಪಡುತ್ತಾನೆಂದರೆ, ಮರುಭೂಮಿಯಲ್ಲಿ ಕಾಣೆಯಾದ ತನ್ನ ಒಂಟೆಯನ್ನು ಮರಳಿ ಪಡೆಯುವವನಿಗಿಂತ ಹೆಚ್ಚು. ಈ ರಮಝಾನಿನ ತಿಂಗಳು ಯಾಕಾಗಿ ಇದೆಯೆಂದರೆ, ಒಬ್ಬನು ವರ್ಷವಿಡೀ ಬಲಹೀನತೆಗಳಿಂದಲೂ ತಪ್ಪಾಗಿಯೂ ವರ್ತಿಸಿದ್ದರೂ ಅವನು ಅಲ್ಲಾಹನ ಬಗ್ಗೆ ಪ್ರೀತಿಯನ್ನು ಹೃದಯದಲ್ಲಿರಿಸಿ ಅಲ್ಲಾಹನ ಕಡೆಗೆ ಅವನು ತನ್ನ ತೌಬವನ್ನು ಅಂಗೀಕರಿಸುವನೆಂಬ ಸಂಕಲ್ಪದೊಂದಿಗೆ ಬಂದರೆ ಅಲ್ಲಾಹನು ಓಡಿ ಬಂದು ಅವನನ್ನು ಆಲಿಂಗಿಸುವನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದಾರೆ: "ಅಲ್ಲಾಹನು ಹೇಳುತ್ತಾನೆ– ಒಬ್ಬನು ನನ್ನ ಸಮೀಪಕ್ಕೆ ಗೇಣಿನಷ್ಟು ಬಂದರೆ ನಾನು ಮೊಳದಷ್ಟು ಅವನ ಸಮೀಪವಾಗುತ್ತೇನೆ. ಅವನು ನನ್ನ ಬಳಿ ಒಂದು ಮೊಳದಷ್ಟು ಸಮೀಪವಾದರೆ ನಾನು ಅವನಿಗೆ ಎರಡು ಮೊಳದಷ್ಟು ಸಮೀಪವಾಗುವೆನು. ಅವನು ನನ್ನ ಬಳಿಗೆ ನಡೆದು ಬಂದರೆ ನಾನು ಅವನ ಸಮೀಪಕ್ಕೆ ಓಡುತ್ತಾ ಹೋಗುವೆನು."

ತಾಯಿಗಿಂತ ಹೆಚ್ಚು ಕರುಣಾಳು ಆಗಿರುವ ಅಲ್ಲಾಹನು ತೌಬವನ್ನು ಅಂಗೀಕರಿಸಲು ಮತ್ತು ತನ್ನ ದಾಸನಿಂದ ಸಂತೋಷಪಡಲು ವಿವಿಧ ಸಾಮಗ್ರಿಗಳನ್ನು ಒದಗಿಸಿದ್ದಾನೆ. ದಾಸನು ಅವರ ಲಾಭ ಪಡೆಯಲು ಪ್ರಯತ್ನಿಸುವುದಿಲ್ಲವಾದರೆ ಅದು ಅವನ ದುರಾದೃಷ್ಟವಾಗಿದೆ ಮತ್ತು ಅವನ ಕಠೋರ ಹೃದಯತೆ ಆಗಿದೆ. ಅಲ್ಲಾಹನು ತನ್ನ ದಾಸರ ಬಗ್ಗೆ ಹೊಂದಿರುವ ಪ್ರೀತಿಯನ್ನು ಇಂತಹ ಉದಾಹರಣೆಗಳಿಂದ ಚಿತ್ರಿಸಲಾಗಿದ್ದರೂ ಅಲ್ಲಾಹನ ಪ್ರೀತಿಯ ಚಿತ್ರ ಈ ಉದಾಹರಣೆಗಳಿಗಿಂತ ಬಹಳ ಮಿಗಿಲಾಗಿದೆ. ಅಲ್ಲಾಹನು ಎಷ್ಟು ಪ್ರೀತಿಯಿಂದ ತನ್ನ ದಾಸನ ಕಡೆಗೆ ನೋಡುತ್ತಾನೋ ಅದರ

ಚಿತ್ರವನ್ನು ನಾವು ಬರೆಯಲಾರೆವು. ಹದೀಸುಗಳಿಂದಲೂ ಸ್ಪಷ್ಟವಾಗುತ್ತದೆ. ಹದೀಸುಗಳಲ್ಲಿ ಪ್ರಸ್ತಾಪಿಸಲಾದ ಉದಾಹರಣೆಗಳು ಪ್ರೀತಿಯ ಬಹಳ ಉನ್ನತ ಮಟ್ಟವನ್ನು ಸೂಚಿಸುತ್ತಿವೆಯಾದರೂ ಅಲ್ಲಾಹನು ತನ್ನ ದಾಸನೊಂದಿಗೆ ತೋರಿಸುವ ಪ್ರೀತಿಯ ಉದಾಹರಣೆ ನಮ್ಮ ಲೌಕಿಕ ಉದಾಹರಣೆಗಳ ಕಲ್ಪನೆಗಳಿಗಿಂತ ಬಹಳ ಉನ್ನತ ಮಟ್ಟದ್ದಾಗಿದೆ. ಅದನ್ನು ವಿವರಿಸಲು ಅಸಾಧ್ಯವಾಗಿದೆ. ಈ ಪ್ರೀತಿಯ ಒಂದು ಉದಾಹರಣೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ವಿವರಿಸಿದ್ದಾರೆ: ಬದ್ರ್ ಯುದ್ಧದಲ್ಲಿ ಶತ್ರುಗಳು ಸೋತು ಹೋಗಿದ್ದರು. ಮತ್ತು ಯುದ್ಧ ಹೆಚ್ಚುಕಮ್ಮಿ ಕೊನೆಗೊಂಡಿತ್ತು. ಬಾಕಿ ಉಳಿದ ಅವಿಶ್ವಾಸಿಗಳ ಶೂರರಾದ ಸೈನಿಕರು ತಮ್ಮ ಸವಾರಿ ಮೃಗಗಳನ್ನೇರಿ ಚಾಟಿಯಿಂದ ಹೊಡೆದು ಯುದ್ಧ ಕ್ಷೇತ್ರದಿಂದ ಓಡಿಹೋಗಲು ಪ್ರಯತ್ನಿಸುತ್ತಿದ್ದರು. ಈ ಸಂದರ್ಭದಲ್ಲಿ ಒಬ್ಬ ಮಹಿಳೆ ಹೆದರಿಕೆಯಿಲ್ಲದೆ ಯುದ್ಧದ ಮೈದಾನದಲ್ಲಿ ತಿರುಗಾಡುತ್ತಿದ್ದಳು. ಅವಳಲ್ಲಿ ಒಂದು ಉತ್ಸಾಹ ಮತ್ತು ಹುಚ್ಚುತನವಿತ್ತು. ಅವಳು ಒಮ್ಮೆ ಒಂದು ಮಗುವನ್ನು ಎತ್ತಿಕೊಳ್ಳುತ್ತಿದ್ದಳು ಇನ್ನೊಮ್ಮೆ ಇನ್ನೊಂದು ಮಗುವನ್ನು ಎತ್ತಿಕೊಳ್ಳುತ್ತಾ ತಿರುಗಾಡುತ್ತಿದ್ದಳು. ಆ ಮಹಿಳೆಯ ಮಗುವು ಕಾಣೆಯಾಗಿದೆ ಅದನ್ನು ಅವಳು ಹುಡುಕುತ್ತಿದ್ದಾಳೆ ಎಂದು ಶಿಷ್ಯರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿದರು. ತಾಯಿಯ ಪ್ರೀತಿ ಎಷ್ಟು ಗಾಢವಾಗಿರುತ್ತದೆ ಎಂದರೆ ಇದು ಯುದ್ಧದ ಮೈದಾನ, ಇಲ್ಲಿ ಎಲ್ಲ ಕಡೆ ನಾಶ ಕಾಣಿಸುತ್ತದೆ ಎಂಬ ಚಿಂತೆಯೇ ಆಕೆಗಿರಲಿಲ್ಲ. ಅವಳು ಒಂದು ಮಗುವನ್ನು ಕಂಡ ಕೂಡಲೆ ಎತ್ತಿಕೊಳ್ಳುತ್ತಿದ್ದಳು ಮತ್ತು ಅದನ್ನು ನೋಡುವಾಗ ತನ್ನ ಮಗುವಲ್ಲವೆಂದು ತಿಳಿದು ಅದನ್ನು ಬಿಟ್ಟು ಮುಂದೆ ಹೋಗುತ್ತಿದ್ದಳು. ಕೊನೆಗೆ ಆಕೆಯ ಮಗು ಆಕೆಗೆ ಲಭಿಸಿತು. ಆಕೆ ಮಗುವನ್ನು ಪ್ರೀತಿಯಿಂದ ತಬ್ಬಿಕೊಂಡು ವಾತ್ಸಲ್ಯದೋರಿದಳು. ಅವಳು ಎಲ್ಲವನ್ನೂ ಮರೆತು ಅಲ್ಲೇ ಮಗುವನ್ನೆತ್ತಿ ಕುಳಿತು ಬಿಟ್ಟಳು. ಇದು ಯುದ್ಧದ ಮೈದಾನವಾಗಿದೆ ಇಲ್ಲಿ ಮೃತ ಸೈನಿಕರ ಶವಗಳು ಬಿದ್ದಿವೆ ಎಂಬ ಯೋಚನೆ ಆಕೆಗಿರಲಿಲ್ಲ. ಯುದ್ಧ ಸಂಪೂರ್ಣವಾಗಿ ಮುಗಿದಿಲ್ಲ, ನನಗೆ ಸಹ ಅಪಾಯ ಉಂಟಾಗಬಹುದೆಂಬ ಚಿಂತೆ ಆಕೆಗಿರಲಿಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: "ನೋಡಿದಿರಾ, ಆ ಮಹಿಳೆ ತನ್ನ ಕಾಣೆಯಾದ ಮಗು ದೊರಕಿದಾಗ ಎಷ್ಟು ಸಮಾಧಾನದಿಂದ ಕುಳಿತುಕೊಂಡಳು. ಅವಳು ತನ್ನ ಮಗುವನ್ನು ಹುಡುಕುತ್ತಿದ್ದಾಗ ಎಷ್ಟು ಗಾಬರಿಗೊಂಡಿದ್ದಳು ಮತ್ತು ಅಲೆದಾಡುತ್ತಾ ಇದ್ದಳು." ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳುತ್ತಾರೆ– "ಅಲ್ಲಾಹನು ತನ್ನ ದಾಸರೊಂದಿಗೆ ಹೊಂದಿರುವ ಪ್ರೀತಿಯ ಉದಾಹರಣೆ ಹೀಗೆಯೇ ಆಗಿದೆ. ಅಲ್ಲಾಹನು ಇದಕ್ಕಿಂತಲೂ ಹೆಚ್ಚು ಪ್ರೀತಿ ಹೊಂದಿರುತ್ತಾನೆ." ಒಬ್ಬ ದಾಸನು ತನ್ನ ತಪ್ಪು ಕೃತ್ಯಗಳಿಂದ ಮತ್ತು ಪಾಪಗಳ ಕಾರಣ ಅಲ್ಲಾಹನಿಂದ ದೂರವಾಗಿ ಹೋಗುವಾಗ ಅಲ್ಲಾಹನಿಗೆ ಅವರ ಬಗ್ಗೆ ಎಷ್ಟು ದುಃಖವಾಗುತ್ತದೆ ಎಂದರೆ ಈ ಮಹಿಳೆಯ ಮಗು ಕಾಣೆಯಾದಾಗ ಆ ಮಹಿಳೆಗೆ ಉಂಟಾದ ದುಃಖದ ಹಾಗೆ. ದಾಸನು ತೌಬ ಮಾಡಿ ಮರಳಿ ಬರುವಾಗ ಅಲ್ಲಾಹನಿಗೆ ಈ ಮಹಿಳೆಗೆ ಉಂಟಾದ ಸಂತೋಷಕ್ಕಿಂತ ಹೆಚ್ಚು ಸಂತೋಷವಾಗುತ್ತದೆ. ನಮ್ಮ ಅಲ್ಲಾಹನು ಯಾವಾಗಲೂ ಕ್ಷಮಿಸಲು ಸಿದ್ಧನಾಗಿರುತ್ತಾನೆ. ಆದರೆ ನಾವು ಕ್ಷಮೆಯನ್ನು ಪಡೆಯಲು ಸಿದ್ಧರಾಗಬೇಕು ಮತ್ತು ಅದಕ್ಕೋಸ್ಕರ ಅಲ್ಲಾಹನೆಡೆಗೆ ಧಾವಿಸಬೇಕು.

ನಮ್ಮ ಅಲ್ಲಾಹನು ಇಷ್ಟು ಪ್ರಿಯನಾಗಿರುವಾಗ ನಾವು ಎಷ್ಟು ಬಲಿದಾನಗಳನ್ನು ಮಾಡಿ ಅವನ ಕಡೆಗೆ ಸಾಗುವ ಆವಶ್ಯಕತೆ ಇದೆ. ಅವನ ದಾಸನಾಗಲು ಎಷ್ಟು ಪ್ರಯತ್ನ ಮಾಡುವ ಆವಶ್ಯಕತೆ ಇದೆ. ಈ ಅನುಗ್ರಹದಾಯಕ ತಿಂಗಳಲ್ಲಿ **ಸತ್ತಾರುಲ್ ಉಯೂಬ್**(ನ್ಯೂನತೆಗಳನ್ನು ಮರೆಮಾಡುವ) **ಗಫ್ಫಾರು ಝ್ಝುನೂಬ್** (ಪಾಪಗಳನ್ನು ಕ್ಷಮಿಸುವ) ಅಲ್ಲಾಹನ ಕಡೆಗೆ ಓಡುವ ಆವಶ್ಯಕತೆ ಇದೆ. ಅವನ ಮುಂದೆ ಬಾಗಲು ಧಾರಾಳ ಪ್ರಯತ್ನ ಮಾಡುವ ಆವಶ್ಯಕತೆ ಇದೆ. ಶೈತಾನನು ಪ್ರತಿಯೊಂದು ಮೂಲೆಯಲ್ಲಿ ನಿಂತುಕೊಂಡು ತನ್ನ ಪ್ರಲೋಭನೆಗಳಲ್ಲಿ ನಮ್ಮನ್ನು ಬಂಧಿಯನ್ನಾಗಿ ಮಾಡಲು ಪ್ರಯತ್ನಿಸುತ್ತಿರುತ್ತಾನೆ. ನಾವು ಅವನನ್ನು ಎದುರಿಸಿ ಅಲ್ಲಾಹನ ಅಭಯಗಳಿಸಲು ಪ್ರಯತ್ನಿಸುತ್ತಾ ಅವನ ಪ್ರತಿಯೊಂದು ಆಕ್ರಮಣದಿಂದ ರಕ್ಷಣೆಯನ್ನು ಪಡೆಯಬೇಕು. ಅವನನ್ನು ಸೋಲಿಸಿ ನಾವು ಅಲ್ಲಾಹನ ಯಥಾರ್ಥ ದಾಸರಾಗಲು ಪ್ರಯತ್ನ ಮಾಡಬೇಕು. ಆಗ ನಾವು ಅಲ್ಲಾಹನಿಂದ ವಾಸ್ತವಿಕವಾಗಿ ಅನುಗ್ರಹ ಪಡೆಯುವವರಾಗುವೆವು. ನಾವು ನಮ್ಮ ಪ್ರಾರ್ಥನೆಗಳನ್ನು ನಮಗೋಸ್ಕರ ಮತ್ತು ನಮ್ಮ ಸಮೀಪದ ಸಂಬಂಧಿಗಳಿಗೋಸ್ಕರ ಮಾತ್ರ ಸೀಮಿತಗೊಳಿಸಬಾರದು. ಅದನ್ನು ಬಹಳ ಹೆಚ್ಚು ವಿಶಾಲ ಗೊಳಿಸಬೇಕಾದ ಆವಶ್ಯಕತೆಯಿದೆ. ಆಗ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿಗೆ ಸೇರಿದ ಹೊಣೆಗಾರಿಕೆಯನ್ನು ಈಡೇರಿಸುವವರಾಗುವೆವು. ಆಗ ಮಾತ್ರ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿನಲ್ಲಿ ಸೇರುವಂತೆ ಮಾಡಿದುದಕ್ಕಾಗಿ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವವರಾಗುವೆವು. ನಾವು ಈ ಜಮಾಅತಿನಲ್ಲಿ ಸೇರಿದಾಗ ನಮ್ಮ ಕೆಲಸ ಮುಗಿತಾಯಗೊಳ್ಳಲಿಲ್ಲ. ನಾವು ಅಹ್ಮದಿಯಾದೆವು ನಾವು ಬೈಅತ್ ಮಾಡಿದೆವು ಎಂದು ಹೇಳಿದರೆ ಸಾಕಾಗಲಾರದು. ಅಲ್ಲಾಹನು ಬಹಳ ದೊಡ್ಡ ಜವಾಬ್ದಾರಿಯನ್ನು ನಮ್ಮ ಮೇಲೆ ಇರಿಸಿದ್ದಾನೆ. ಈ ಹೊಣೆಗಾರಿಕೆಗಳನ್ನು ಈಡೇರಿಸಲು ದುಆ ಮಾಡಬೇಕೆಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದ್ದಾರೆ. ಆ ರೀತಿ ನಾವು ಜಮಾಅತಿನ ಅಭಿವೃದ್ಧಿಯಲ್ಲಿ ಸಹಾಯಕರಾಗುವೆವು. ನಾವು ಬಲಹೀನರಾಗಿದ್ದೇವೆ. ನಾವು ನಮ್ಮ ತಪ್ಪುಗಳನ್ನು ಮತ್ತು ನ್ಯೂನತೆಗಳನ್ನು ಸಹ ಒಪ್ಪಿಕೊಳ್ಳುತ್ತೇವೆ. ಹೀಗಿದ್ದರೂ ನಾವು ಎಂತಹ ಜನರೆಂದರೆ ಒಂದು ಬೃಹತ್ ವೈಭವಶಾಲಿ ಉದ್ದೇಶ ಲಕ್ಷ್ಯವನ್ನು ಗಳಿಸುವ ಹೊಣೆಗಾರಿಕೆಯನ್ನು ಅಲ್ಲಾಹನು ನಮ್ಮ ಮೇಲೆ ಇರಿಸಿದ್ದಾನೆ. ಈ ಹೊಣೆಗಾರಿಕೆಯನ್ನು ಅಲ್ಲಾಹನ ಅನುಗ್ರಹದಿಂದಲ್ಲದೆ ಈಡೇರಿಸಲು ಸಾಧ್ಯವಾಗದು.

ನಾವು ಪ್ರಾರ್ಥನೆಯ ಕಡೆಗೆ ಹೆಚ್ಚು ಗಮನ ಹರಿಸುವ ಆವಶ್ಯಕತೆ ಇದೆ. ನೀವು ಹೀಗೆ ಪ್ರಾರ್ಥಿಸಿರಿ: "ನಾವು ಬಲಹೀನರಾಗಿದ್ದೇವೆ. ಕೆಲಸ ಬಹಳ ಹೆಚ್ಚು ದೊಡ್ಡದಾಗಿದೆ. ಕೇವಲ ನಮ್ಮ ಪ್ರಯತ್ನದಿಂದ ಈ ಕೆಲಸ

ಪೂರ್ಣವಾಗಲಾರದು. ಓ ಅಲ್ಲಾಹ್, ನಾವು ನಿನ್ನ ಆಜ್ಞೆ ಪ್ರಕಾರ ಪ್ರತಿಯೊಂದು ಬಲಿದಾನ ಅರ್ಪಿಸಲು ಸಿದ್ಧರಾಗಿದ್ದೇವೆ. ಆದರೆ ನೀನು ನಿನ್ನ ಅನುಗ್ರಹದಿಂದ ರಹಸ್ಯವಾದ ಮಾರ್ಗಗಳನ್ನು ಪ್ರಕಟಿಸು ಮತ್ತು ಅವುಗಳನ್ನು ನಮ್ಮ ಸಹಾಯಕ್ಕೆ ನೇಮಿಸು. ನೀನು ಈ ಉದ್ದೇಶಲಕ್ಷ್ಯಗಳನ್ನು ಈಡೇರಿಸಲಿಕ್ಕಾಗಿ ಅವುಗಳನ್ನು ಏರ್ಪಡಿಸಿರುವೆ. ಆ ಮೂಲಕ ಅಸಾಧ್ಯವಾದುದು ಸಾಧ್ಯವಾಗಲಿ.'' ಎಂದು ಪ್ರಾರ್ಥಿಸಿರಿ. ವಾಸ್ತವಿಕವಾಗಿ ಅಲ್ಲಾಹನು ನಮ್ಮನ್ನು ಒಂದು ಬಾಹ್ಯ ಉಪಕರಣಗಳನ್ನಾಗಿ ಮಾತ್ರ ಮಾಡಿದ್ದಾನೆ. ಲೋಕವನ್ನು ಜಯಿಸಲು ಸಾಮರ್ಥ್ಯವಿರುವ ಉಪಕರಣ ಬೇರೆಯೇ ಇದೆ. ಆದರೆ ಆ ಜಯಗಳನ್ನು ಗಳಿಸಲು ನಮ್ಮ ಹೃದಯಗಳಲ್ಲಿ ಒಂದು ನೋವು ಇರಲೇಬೇಕಾಗಿದೆ. ಆ ನೋವು ಪ್ರಾರ್ಥನೆಗಳ ಮೂಲಕ ನಮ್ಮ ಹೃದಯಗಳಿಂದ ಹೊರಗೆ ಬರಬೇಕಾಗಿದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಉದಾಹರಣೆ ನೀಡಿದ್ದಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬದ್ರ್ ಯುದ್ಧದ ವೇಳೆಯಲ್ಲಿ ಒಂದು ಹಿಡಿ ಮರಳನ್ನು ಶತ್ರುಗಳ ಕಡೆಗೆ ಎಸೆದಿದ್ದರು. ಅಲ್ಲಾಹನು ಅದರ ಬಗ್ಗೆ ಹೇಳಿದ್ದಾನೆ. **ಮಾ ರಮಯ್‌ತ ಇಝ್‌ರಮಯ್‌ತ ವಲಾಕಿನ್ನಲ್ಲಾಹರಮಾ** (ನೀನು ಎಸೆದಾಗ, ನೀನಲ್ಲ ಎಸೆದದ್ದು. ಅದನ್ನು ಅಲ್ಲಾಹನೇ ಎಸೆದನು.) ಅಲ್ಲಾಹನು ಹೇಳುತ್ತಾನೆ: ನೀನು ಮರಳು ಎಸೆದಾಗ ಅದು ಸ್ವಲ್ಪ ದೂರ ಹೋಗಿ ಬೀಳುತ್ತಿತ್ತು. ಆದರೆ ನೀನು ಎಸೆಯಲಿಲ್ಲ, ನಾವೇ ಅದನ್ನು ಎಸೆದೆವು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕೈ ಮರಳು ಎಸೆಯಲು ಚಲಿಸಿದಾಗ ಅಲ್ಲಾಹನು ಹೇಳುತ್ತಾನೆ: ನಾವು ಬಿರುಗಾಳಿ ಬೀಸುವಂತೆ ಮಾಡಿದೆವು ಅದರ ಕಾರಣ ಕೋಟ್ಯಾಂತರ ಮರಳು ತುಣುಕುಗಳು ಅವಿಶ್ವಾಸಿಗಳ ಕಣ್ಣುಗಳಿಗೆ ಬಿದ್ದುವು. ಅವಿಶ್ವಾಸಿಗಳ ಕಣ್ಣುಗಳು ಮುಚ್ಚಿ ಹೋದುವು. ಅವರಿಗೆ ಆಕ್ರಮಣ ಮಾಡಲು ಸಾಧ್ಯವಾಗದೆ ಸೋತು ಹೋದರು. ಆ ಮುಷ್ಠಿ ಮರಳಿನ ಹಿಂದೆ ಇದ್ದ ವಾಸ್ತವ ಶಕ್ತಿ ಅಲ್ಲಾಹನ ಶಕ್ತಿ ಸಾಮರ್ಥ್ಯಗಳಾಗಿದ್ದುವು. ಈಗ ನಮ್ಮ ಸ್ಥಿತಿಯೂ ಬದ್ರ್ ಯುದ್ಧದಲ್ಲಿ ಬಳಸಲಾದ ಮರಳಿನ ಹಾಗಿದೆ. ಅದನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ತನ್ನ ಮುಷ್ಟಿಯಲ್ಲಿ ತುಂಬಿಸಿ ಅವಿಶ್ವಾಸಿಗಳ ಕಡೆಗೆ ಎಸೆದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಸೆದ ಮರಳು ಅವಿಶ್ವಾಸಿಗಳನ್ನು ಅಂಧರನ್ನಾಗಿ ಮಾಡಿರಲಿಲ್ಲ. ಬಿರುಗಾಳಿಯ ಮೂಲಕ ಅಲ್ಲಾಹನು ಹಾರಿಸಿದ ಮರಳು ಅವಿಶ್ವಾಸಿಗಳನ್ನು ಅಂಧರನ್ನಾಗಿ ಮಾಡಿತು.''

ಆದುದರಿಂದ ಈ ದಿನಗಳಲ್ಲಿ ಬಹಳ ಹೆಚ್ಚು ಪ್ರಾರ್ಥನೆಗಳನ್ನು ಮಾಡಿರಿ. ನಿಮಗೋಸ್ಕರ, ಅನ್ಯರಿಗೋಸ್ಕರ, ಜಮಾಅತಿನ ಅಭಿವೃದ್ಧಿಗೋಸ್ಕರ ಮತ್ತು ಶತ್ರುಗಳ ಪರಾಜಯಕ್ಕೋಸ್ಕರ ಪ್ರಾರ್ಥನೆ ಮಾಡಿರಿ. ಅಲ್ಲಾಹನ ಪ್ರತಾಪ ಮತ್ತು ವೈಭವ ಪ್ರಕಟವಾಗಲು ಸಹ ಪ್ರಾರ್ಥಿಸಿರಿ. ಲೋಕವು ಅಲ್ಲಾಹನ ಅಸ್ತಿತ್ವವನ್ನು ನಿರಾಕರಿಸುತ್ತಾ ಇದೆ. ಲೋಕದ ಜನರು ಅಲ್ಲಾಹನನ್ನು ಗುರುತಿಸುವವರಾಗಲಿ ಎಂದು ಪ್ರಾಥಿಸಿರಿ. ಅಲ್ಲಾಹನು ನಮ್ಮ ತಪ್ಪುಗಳನ್ನೂ ನಮ್ಮ ನ್ಯೂನತೆಗಳನ್ನೂ ಕ್ಷಮಿಸಲಿ. ಅಲ್ಲಾಹನು ನಮ್ಮೊಳಗೆ ಎಂತಹ ಶಕ್ತಿಯನ್ನು ಹುಟ್ಟಿಸಲಿ ಎಂದರೆ ಅದರಿಂದ ಪ್ರಯೋಜನ ಪಡೆದುಕೊಂಡು ನಾವು ಇಸ್ಲಾಮನ್ನು ಲೋಕದ ಎಲ್ಲ ಧರ್ಮಗಳ ಮೇಲೆ ಜಯಶಾಲಿಯನ್ನಾಗಿ ಮಾಡಲು ನಮಗೆ ಸಾಧ್ಯವಾಗಲಿ. ನಮ್ಮ ಪೈಕಿ ಪ್ರತಿಯೊಬ್ಬನು ಇಸ್ಲಾಮಿನ ಸತ್ಯಸಂಧನಾದ ಸೇವಕನಾಗಬೇಕು. ಲೌಕಿಕ ಆಶಾಭಿಲಾಷೆಗಳು ನಮಗೆ ದ್ವಿತೀಯ ಸ್ಥಾನದಲ್ಲಿರಬೇಕು. ನಮ್ಮ ಹೃದಯ ಎಂತಹ ಆವೇಶದಿಂದ ಭರಿತವಾಗಬೇಕೆಂದರೆ ಧರ್ಮವನ್ನು ಉನ್ನತಿಗೇರಿಸಲು ನಮ್ಮ ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ನಾವು ಕಾರ್ಯನಿರತವನ್ನಾಗಿ ಮಾಡಬೇಕು. ಅಲ್ಲಾಹನು ನಮ್ಮ ಕೆಲಸಗಳಿಗೆ ಮತ್ತು ನಮ್ಮ ಸಾಮರ್ಥ್ಯಗಳಿಗೆ ಶಕ್ತಿ ನೀಡಲಿ. ಎಂತಹ ಶಕ್ತಿ ನೀಡಲಿ ಎಂದರೆ ಶತ್ರುಗಳ ಶಕ್ತಿಸಾಮರ್ಥ್ಯಗಳು ನಮ್ಮ ಎದುರಿಗೆ ನಿಷ್ಪ್ರಯೋಜಕವಾಗಲಿ. ಅಲ್ಲಾಹನು ನಮ್ಮ ತಪ್ಪುಗಳನ್ನು ಕ್ಷಮಿಸಲಿ. ಮಾತ್ರವಲ್ಲ ನಮ್ಮ ಹೃದಯಗಳಲ್ಲಿ ಪಾಪಗಳ ಬಗ್ಗೆ ಎಂತಹ ಜಿಗುಪ್ಸೆ ಉಂಟಾಗಬೇಕೆಂದರೆ ನಾವು ಅಲ್ಲಾಹನ ಆಜ್ಞೆಗಳನ್ನು ಎಂದೂ ಉಲ್ಲಂಘಿಸುವವರಾಗದಿರಲಿ. ಯಾರ ಬಗ್ಗೆ ಅಲ್ಲಾಹನು ನೀವು ನನ್ನ ಆಜ್ಞೆಗಳನ್ನು ಪಾಲಿಸಿರಿ, ನನ್ನನ್ನು ನಂಬಿರಿ ಎಂದು ಹೇಳಿರುವನೋ ಅವರೊಂದಿಗೆ ನಾವು ಸೇರುವವರಾಗಲಿ. ಒಳಿತುಗಳ ಮತ್ತು ಸತ್ಕರ್ಮಗಳ ಬಗ್ಗೆ ನಮಗೆ ಪ್ರೀತಿ ಉಂಟಾಗಲಿ. **ತಖ್ವ** ನಮ್ಮ ಹೃದಯಗಳಲ್ಲಿ ಬಲಯುತವಾಗಿ ಸ್ಥಾಪಿತವಾಗಲಿ. ಅಲ್ಲಾಹನ ಪ್ರೀತಿ ಮತ್ತು ಪ್ರೇಮ ನಮ್ಮ ಆಹಾರವಾಗಲಿ. ನಮ್ಮ ಪ್ರತಿಯೊಂದು ಕೆಲಸ, ನಮ್ಮ ಪ್ರತಿಯೊಂದು ಮಾತು, ನಮ್ಮ ಪ್ರತಿಯೊಂದು ವರ್ತನೆ ಅಲ್ಲಾಹನ ಇಚ್ಛೆಗೆ ಅನುಸಾರವಾಗಿರಲಿ. ನಾವು ಅವನ ಸನ್ನಿಧಿಯಲ್ಲಿ ಹಾಜರಾಗುವಾಗ ಅವನು ತನ್ನ ಸಂಪ್ರೀತಿಯ ಅನುಮತಿಯನ್ನು ನಮಗೆ ನೀಡುವಂತಾಗಲಿ. ಈ ರಮಝಾನ್ ತಿಂಗಳಲ್ಲಿ ವಾಸ್ತವಿಕವಾಗಿ ಇವುಗಳೆಲ್ಲ ನಮಗೆ ಲಭಿಸುವಂತೆ ಅಲ್ಲಾಹನು ನಮಗೆ ಅನುಗ್ರಹ ನೀಡಲಿ – ಆಮೀನ್.

---------------*****---------------


***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 19-06-2015.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon